**ದಿನಾಂಕ 27.11.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಗಳ ಪರ: ಶ್ರೀ. ಕೆ.ಎಸ್.ಆರ್. ವಕೀಲರಿಂದಃ–**

ನನಗೂ ಮತ್ತು ಪ್ರತಿವಾದಿಗಳಿಗೂ ಸರ್ವೆ ನಂ.89 ರಲ್ಲಿರುವ 36 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ವೈಮನಸ್ಸು ಇರುತ್ತದೆ ಎಂದರೆ ಸರಿ. ನನ್ನ ದೊಡ್ಡಮ್ಮನವರಾದ ಸಿದ್ದಮ್ಮನವರು ಬೀರೂರು ಪೊಲೀಸ್ ಠಾಣೆಗೆ ದಿನಾಂಕ 16.03.2017 ರಂದು ನನ್ನ, ನನ್ನ ತಂದೆ ಹಾಗೂ ನನ್ನ ತಮ್ಮನ ವಿರುದ್ಧ ದೂರು ದಾಖಲು ಮಾಡಿದ್ದರು ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ಸಹ ದೂರನ್ನು ನೀಡಿದ್ದೆ ಎಂದು ನುಡಿಯುತ್ತಾರೆ. ತದನಂತರ ಪೊಲೀಸರು ಇಬ್ಬರನ್ನು ಕರೆಯಿಸಿ ಸಿವಿಲ್ ವ್ಯಾಜ್ಯವಾಗಿದ್ದರಿಂದ ನ್ಯಾಯಾಲಯದಲ್ಲಿ ಬಗೆಹರಿಸಿಕೊಳ್ಳಿ ಎಂದು ತಿಳಿಸಿ ಕಳುಹಿಸಿದ್ದರು ಎಂದರೆ ಸರಿ. ಸಾಕ್ಷಿಗೆ ಬೀರೂರು ಪೊಲೀಸರು ನೀಡಿದ ಸ್ವೀಕೃತಿಯನ್ನು ತೋರಿಸಿ ನನ್ನ ದೊಡ್ಡಮ್ಮ ಸಿದ್ದಮ್ಮನವರು ದೂರು ನೀಡಿದ ದಾಖಲೆಯಾಗಿರುತ್ತದೆ ಎಂಬುದನ್ನು ಸಾಕ್ಷಿ ನೋಡಿ ಒಪ್ಪಿದ್ದರಿಂದ ಅದನ್ನು ನಿಡಿ.1 ಎಂದು ಗುರುತಿಸಲಾಯಿತು.

ಸರ್ವೆ ನಂ.89 ರ ಜಮೀನನ್ನು ನಾನು ಸರ್ವೆಯನ್ನು ಮಾಡಿಸಿಕೊಡಿ ಎಂದು ಹಾಗೂ ನೊಂದಣಿ ಮಾಡಿಸಿಕೊಡಿ ಎಂದು ನಾನು ಪ್ರತಿವಾದಿಯರನ್ನು ಕೇಳಿರುತ್ತೇನೆ. ಆದರೆ ನಾನೇ ಹೋಗಿ ಸರ್ವೆಯನ್ನು ಮಾಡಿಸಿರುವುದಿಲ್ಲ. ನಾನು ಪ್ರತಿವಾದಿಯರನ್ನು ಕರಾರುಪತ್ರ ಬರೆದುಕೊಟ್ಟ ಮೂರು ತಿಂಗಳ ಹಿಂದೆ ಕೇಳಿರುತ್ತೇನೆ. ಅಂದರೆ ದಿನಾಂಕ 06.02.2017 ರಂದು ಪ್ರತಿವಾದಿಗಳನ್ನು ಕೇಳಿರುತ್ತೇನೆ. ನಿಪಿ.2 ರ ಕರಾರುಪತ್ರದ ಬಗ್ಗೆ ನನಗೆ ಪೂರ್ಣ ಮಾಹಿತಿ ಇರುತ್ತದೆ. ನಿಪಿ.2 ರ ಕರಾರುಪತ್ರದಲ್ಲಿ ಸ್ವಾಧೀನ ನೀಡಿದ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ನನಗೆ ಕರಾರುಪತ್ರ ಬರೆದುಕೊಟ್ಟ ದಿನವೇ ದಾವಾ ಸ್ವತ್ತಿನ ಸ್ವತ್ತನ್ನು ಬಿಟ್ಟುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ.2 ರ ಕರಾರುಪತ್ರವನ್ನು ಯಾರು ಬೆರಳಚ್ಚು ಮಾಡಿರುತ್ತಾರೆಂದು ಬಿಕ್ಲಂದಾರರಾಗಿ ಅಥವಾ ಕರುಡು ತಯಾರಿಸಿದವರ ಸಹಿ ಮತ್ತು ಸೀಲು ಇರುವುದಿಲ್ಲ ಎಂದರೆ ಸಾಕ್ಷಿಯು ಪರಮೇಶ್ವರಪ್ಪ ಎನ್ನುವವರು ಬಿಕ್ಲಂದಾರರಾಗಿ ಪಕ್ಕದಲ್ಲಿ ಸಹಿ ಮತ್ತು ಸೀಲನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ.

ನಿಪಿ.2 ರ ಕರಾರುಪತ್ರದ ಪ್ರತಿ ಪುಟಗಳಲ್ಲಿ ಹೆಬ್ಬೆಟ್ಟಿನ ಗುರುತುಗಳನ್ನು 2 ನೇ ಪ್ರತಿವಾದಿ ಸಿದ್ದಮ್ಮನವರು ಹಾಕಿರುತ್ತಾರೆ. 2 ನೇ ಪ್ರತಿವಾದಿ ಸಿದ್ದಮ್ಮನವರು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದರೆ ಆ ಹೆಬ್ಬೆಟ್ಟಿನ ಗುರುತನ್ನು L.T.M ಮಾಡಿ ಯಾರೂ ಗುರುತಿಸಿರುವುದಿಲ್ಲ ಎಂದರೆ, ಸಾಕ್ಷಿಯು ಸಿದ್ದಮ್ಮನವರೇ ಹೆಬ್ಬೆಟ್ಟಿನ ಗುರುತನ್ನು ಹಾಕಿರುತ್ತಾರೆ ಎಂದು ನುಡಿಯುತ್ತಾರೆ. ಕಡೂರಿನ 2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಲಯದಲ್ಲಿ ಅಸಲು ದಾವಾ ಸಂ.338/2022 ರಂತೆ ಪ್ರತಿವಾದಿಯರು ನನ್ನ ವಿರುದ್ಧ ನಾನು ಈ ದಾವೆಯನ್ನು ಹಾಕುವ ಪೂರ್ವದಲ್ಲಿಯೇ ದಾವೆಯನ್ನು ಸಲ್ಲಿಸಿರುತ್ತಾರೆ ಎಂದರೆ ಸರಿ. ನಾನು ಸದರಿ ದಾವೆಯಲ್ಲಿ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿ.

ಈ ದಾವೆಯನ್ನು ಸಲ್ಲಿಸಿರುವ ಪೂರ್ವದಲ್ಲಿ ನಾನು ನೀಡಿದ ಕಾನೂನು ತಿಳುವಳಿಕೆ ಪತ್ರಕ್ಕೆ ಪ್ರತಿವಾದಿಯರು ಸಹ ಪ್ರತ್ಯುತ್ತರವನ್ನು ನೀಡಿದ್ದು, ಸದರಿ ಪ್ರತ್ಯುತ್ತರದಲ್ಲಿ ಪ್ರತಿವಾದಿಯರು ನನ್ನಿಂದ ಸಾಲವಾಗಿ ಪಡೆದ ರೂ.5,000/-, ರೂ.30,000/- ಮತ್ತು ಅದಕ್ಕೆ ತಗಲುವ ರೂ.10,000/- ಬಡ್ಡಿಯನ್ನು ಸೇರಿಸಿ ಅಂದರೆ ಒಟ್ಟು ರೂ.45,000/-ಗಳನ್ನು ದಿನಾಂಕ 17.04.2017 ರಂದು ತರೀಕೆರೆಯ ಜಯಣ್ಣ, ಸೋಮಣ್ಣ ಹಾಗೂ ಸಿದ್ದರಹಳ್ಳಿಯ ಶೇಖರಣ್ಣ ಮತ್ತು ರಮೇಶಣ್ಣರವರ ಮುಂದೆ ಬೀರೂರಿನ ಗಣಪತಿ ದೇವಸ್ಥಾನದಲ್ಲಿ ಪ್ರತಿವಾದಿಯರು ನನಗೆ ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಒಂದು ವೇಳೆ ಕ್ರಯದ ಕರಾರುಪತ್ರವನ್ನು ಪ್ರತಿವಾದಿಯರಿಂದ ದಾವಾ ಆಸ್ತಿಗೆ ಸಂಬಂದಿಸಿದಂತೆ ಬರೆಸಿಕೊಳ್ಳುವುದಾಗಿದ್ದರೆ ಅದನ್ನು ನೊಂದಾಯಿಸಿಕೊಳ್ಳುತ್ತಿದ್ದೆ, ಆದರೆ ನಾನು ಸಾಲವಾಗಿ ನೀಡಿದ ಹಣಕ್ಕೆ ಪ್ರತಿಯಾಗಿ ಪ್ರತಿವಾದಿಯರಿಂದ ನಿಪಿ.1 ರ ದಾಖಲೆಗೆ ಸಹಿ ಮತ್ತು ಹೆಬ್ಬೆಟ್ಟಿನ ಗುರುತನ್ನು ಸದರಿ ದಾಖಲೆಗೆ ಪಡೆದು ದುರುಪಯೋಗಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ.

ದಾಸರಹಳ್ಳಿಯ ಸುತ್ತ-ಮುತ್ತ 01 ಎಕರೆ ಜಮೀನಿಗೆ ಈಗ ಸುಮಾರು ರೂ.6 ರಿಂದ 7 ಲಕ್ಷ ಬೆಲೆ ಇರುತ್ತದೆ. 2016 ರಲ್ಲಿ ಉಪನೊಂದಣಾಧಿಕಾರಿಗಳಿಂದ ದಾವಾ ಆಸ್ತಿ ಎಷ್ಟು ಬೆಲೆಬಾಳುತ್ತದೆ ಎಂದು ತೋರಿಸಲು ಮೌಲ್ಯಮಾಪನಪಟ್ಟಿಯನ್ನು ನಾನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಸರ್ವೆ ನಂ.89 ರಲ್ಲಿ ಒಟ್ಟು 04 ಪಹಣಿ ಪತ್ರಿಕೆಗಳು ಬರುತ್ತವೆ. ಅವುಗಳು ಸಿದ್ದಮ್ಮ, ಕೃಷ್ಣಪ್ಪ, ಲಕ್ಷ್ಮಪ್ಪ, ಕೃಷ್ಣಪ್ಪ ರವರ ಹೆಸರಿನಲ್ಲಿ 04 ಪಹಣಿಗಳು

ಬರುತ್ತಿರುತ್ತವೆ.

ನನ್ನ ವಾದಪತ್ರದಲ್ಲಾಗಲಿ, ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲಿ ಸರ್ವೆ ಸ್ಕೆಚ್ ಮಾಡಲು ಅರ್ಜಿ ನೀಡಿದ ಬಗ್ಗೆಯಾಗಲಿ ಅಥವಾ ಅಳತೆ ಮಾಡಲು ಕೋರಿ ಅರ್ಜಿ ಸಲ್ಲಿಸಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಯರೇ ಅವುಗಳನ್ನು ಮಾಡಿಸಿಕೊಡಿಸುವುದಾಗಿ ತಿಳಿಸಿದ್ದರು ಎಂದು ನುಡಿಯುತ್ತಾರೆ. ನನ್ನ ವಾದಪತ್ರದಲ್ಲಾಗಲಿ, ನನ್ನ ಮುಖ್ಯ ವಿಚಾರಣಾ ಪ್ರಮಾಣಪತ್ರದಲ್ಲಾಗಲಿ ಅಥವಾ ನಿಪಿ.3 ರ ನೋಟೀಸಿನಲ್ಲಾಗಲಿ ಕ್ರಯದ ಬಾಕಿ ಇರುವ ಹಣವನ್ನು ಯಾವ ಬ್ಯಾಂಕಿನಲ್ಲಿ ಠೇವಣೀಕರಿಸಿಕೊಂಡು ಕ್ರಯವನ್ನು ಮಾಡಿಸಿಕೊಳ್ಳಲು ತಯಾರು ಇರುವುದಾಗಿ ಎಲ್ಲಿಯೂ ಸಹ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಾನು ನಗದು ರೂಪದಲ್ಲಿ ಇಟ್ಟುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ.

ದಿನಾಂಕ 26.11.2016 ರಲ್ಲೇ ನಾನು ಪ್ರತಿವಾದಿಯರಿಗೆ ಕ್ರಯದ ಕರಾರುಪತ್ರದ ಬಾಬ್ತು ಮುಂಗಡವಾಗಿ ರೂ.5,000/- ಹಣವನ್ನು ನೀಡಿರುತ್ತೇನೆ. ದಿನಾಂಕ 06.02.2017 ರಂದು ಪ್ರತಿವಾದಿಯರಿಗೆ ಪುನಃ ರೂ.25,000/-ಗಳನ್ನು ನೀಡಿ ದಾವಾ ಆಸ್ತಿಯನ್ನು ನೊಂದಣಿ ಮಾಡಿಸಿಕೊಡಿ ಬನ್ನಿ ಎಂದು ಕರೆದಿರುತ್ತೇನೆ. ನಿಪಿ.2 ರ ಕರಾರುಪತ್ರದಲ್ಲಿ ನಾನು ರೂ.25,000/-ಗಳನ್ನು ನೀಡಿರುವ ಬಗ್ಗೆ ನಮೂದು ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಪ್ರತಿವಾದಿಯರು ಸಂಬಂಧಿಕರಾಗಿದ್ದರಿಂದ ನಾನು ರೂ.25,000/- ಪುನಃ ಕೊಟ್ಟ ಬಗ್ಗೆ ನಮೂದು ಮಾಡಿಸಿಕೊಂಡಿರುವುದಿಲ್ಲ ಎಂದು ನುಡಿಯುತ್ತಾರೆ. ಬಾಕಿ ಎಷ್ಟು ಹಣ ಕೊಡಬೇಕೆಂದು ಸಹ ನಿಪಿ.2 ರ ಕರಾರುಪತ್ರದಲ್ಲಿ ನಮೂದು ಇರುವುದಿಲ್ಲ ಎಂದರೆ ಸರಿ.

ಸರ್ವೆ ನಂ.89 ರ ಜಮೀನು ಈಗ ಪಾಳುಬಿದ್ದಿರುತ್ತದೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ಸಪ್ಪೆ, ಜೋಳವನ್ನು ಎಲ್ಲವನ್ನು ಹಾಕಿಕೊಂಡು ನಾನು ಬೇಸಾಯ ಮಾಡಿಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ದಾವಾ ಸ್ವತ್ತಿನಲ್ಲಿ ಬೆಳೆ ಮಾಡಿಕೊಂಡಿರುವ ಬಗ್ಗೆ ಹಾಗೂ ಸ್ವಾಧೀನದಲ್ಲಿ ಇರುವ ಬಗ್ಗೆ ನ್ಯಾಯಾಲಯಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಏಕೆಂದರೆ ಪ್ರತಿವಾದಿಯರು ನಮಗೆ ದಾವಾ ಸ್ವತ್ತನ್ನು ನೊಂದಣಿ ಮಾಡಿಕೊಟ್ಟಿರುವುದಿಲ್ಲ ಎಂದು ನುಡಿಯುತ್ತಾರೆ. 1 ನೇ

ಪ್ರತಿವಾದಿಯನ್ನು ಈ ದಾವೆಯಲ್ಲಿ ಏಕೆ ಪಕ್ಷಗಾರರನ್ನಾಗಿ ಮಾಡಿರುತ್ತೀರಾ ಎಂಬ ಪ್ರಶ್ನೆಗೆ ಸಾಕ್ಷಿಯು ನಿಪಿ.2 ರ ಕ್ರಯಕರಾರುಪತ್ರಕ್ಕೆ 1 ನೇ ಪ್ರತಿವಾದಿಯು ಸಹ ಸಹಿ ಮಾಡಿರುತ್ತಾರೆ, ಆದ್ದರಿಂದ ಅವರನ್ನು ಪಕ್ಷಗಾರರನ್ನಾಗಿ ಈ ದಾವೆಯಲ್ಲಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ರೂ.20,000/–ಕ್ಕಿಂತ ಹೆಚ್ಚು ಹಣವನ್ನು ಕೊಡುವುದಾದರೆ ಚೆಕ್ ಮೂಲಕ ನೀಡಬೇಕೆಂದು ನಿಯಮ ಇರುತ್ತದೆ ಎಂದರೆ ಸರಿ.

ಪ್ರತಿವಾದಿಗಳು ಅನಕ್ಷರಸ್ಥರಾಗಿದ್ದು, ಅದನ್ನು ದುರುಪಯೋಗಪಡಿಸಿಕೊಂಡು ಪ್ರತಿವಾದಿಯರ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನಿಜವಾಗಿ ಪ್ರತಿವಾದಿಯರಿಗೆ ಹಣವನ್ನು ನೀಡಿದ್ದರೆ ನಾನು ಬ್ಯಾಂಕಿನ ಮೂಲಕ ವ್ಯವಹಾರವನ್ನು ಮಾಡುತ್ತಿದ್ದೆ, ನಾನು ಪ್ರತಿವಾದಿಯರಿಗೆ ಯಾವುದೇ ಹಣವನ್ನು ನೀಡಿರುವುದಿಲ್ಲ, ಎಲ್ಲಾ ದಾಖಲಾತಿಗಳನ್ನು ಸೃಷ್ಠಿಸಿ ತಂದು ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಹೊರತುಪಡಿಸಿ ಬೇರೆ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿಯರಿಗೆ ತರೀಕೆರೆಯಲ್ಲಿಯೂ ಸಹ ಜಮೀನು ಇರುತ್ತದೆ. ಪ್ರತಿವಾದಿಯರು ನನ್ನಿಂದ ಪಡೆದ ಸಾಲದ ಹಣವನ್ನು ಬಡ್ಡಿ ಸಮೇತ ಹಿಂತಿರುಗಿಸಲು ತಯಾರಿರುತ್ತಾರೆ ಎಂದರೆ, ಸಾಕ್ಷಿಯು ನನಗೆ ಜಮೀನು ಮಾರಾಟ ಮಾಡಲು ಕ್ರಯಕರಾರುಪತ್ರವನ್ನು ಮಾಡಿಕೊಟ್ಟಿದ್ದು ನನಗೆ ಜಮೀನು ಬೇಕೆಂದು ನುಡಿಯುತ್ತಾರೆ.

**ಮರುವಿಚಾರಣೆಃ ಇರುವುದಿಲ್ಲ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದ್ದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೇ ಸ ಇ

sd/–

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದಃನ್ಯಾ:ದಂ.,ರವರು ಕಡೂರು.